12.30 ಪಿ.ಎಂ.

ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ತೋಟತ್ತಾಡಿ ಗ್ರಾಮದ ಪೆರ್ನಾಲ್ ಗುಡ್ಡದ ಅವಶ್ಯಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಚಾರ್ಮಾಡಿ ಗ್ರಾಮದ ಅಂತರ ಕಲ್ಕಾರ್, ಪೊಂಗರದಡಿ ಮಧ್ಯದಲ್ಲಿರುವ ಪೆಡಕಲ್ಲು ಎಂಬಲ್ಲಿ ಸೇತುವೆ ನಿರ್ಮಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

ಪೂರಕ ಅಂದಾಜುಗಳು, 2000-2001

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 205(1)ನೇ ಅನುಚ್ಛೇದದ ಮೇರೆಗೆ "2000-2001ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಡಾ॥ ರಾಜ್‌ಕುಮಾರ್ ಅವರ ಅಪಹರಣ ಕುರಿತು

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಡಾ॥ ರಾಜ್‌ಕುಮಾರ್ ಅವರ ಅಪಹರಣದ ಕುರಿತು ಮೊನ್ನೆಯ ದಿವಸ ಸರ್ವಪಕ್ಷಗಳ ನಾಯಕರ ಸಭೆಯನ್ನು ಕರೆದಿದ್ದರು. ನಂತರ ಪ್ರತೀ ದಿವಸ ಒಂದೊಂದು ರೀತಿಯಾದಂಥ ಬೆಳವಣಿಗೆಗಳು ನಡೆಯುತ್ತಿದ್ದುದನ್ನು ನಾವು ನೋಡುತ್ತಿದ್ದೇವೆ. ನಿನ್ನೆಯ ದಿವಸ ಗೃಹಮಂತ್ರಿಗಳಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರದ ಗೃಹಮಂತ್ರಿಗಳಾದ ಸನ್ಮಾನ್ಯ ಅದ್ವಾನಿ ಅವರನ್ನು ಭೇಟಿ ಮಾಡಿ 15 ರಿಂದ 20 ನಿಮಿಷಗಳ ಕಾಲ ಚರ್ಚೆ ಮಾಡಿದರೆಂದು ಪತ್ರಿಕೆಗಳಲ್ಲಿ ಬಂದ ವರದಿಯನ್ನು ನಾವು ನೋಡಿದ್ದೇವೆ. ಅಲ್ಲಿ ಏನು ಚರ್ಚೆಯಾಯಿತು ಎನ್ನುವ ಬಗ್ಗೆ ಸದನದಲ್ಲಿ ಬೆಳಕು ಚೆಲ್ಲುವಂಥಾದ್ದು ಆಗಬೇಕು. ಇನ್ನೊಂದು ಪ್ರಮುಖವಾದಂಥ ವಿಚಾರ ಏನೆಂದರೆ ಇಲ್ಲಿಯವರೆಗೂ ನಮ್ಮ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಮತ್ತು ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬಾರಿ ಭೇಟಿ ಆಗಿ ಚರ್ಚೆ ಮಾಡಿದ್ದಾರೆ. ಮತ್ತು ಡಾ॥ ರಾಜ್‌ಕುಮಾರ್ ಅವರು ಸುರಕ್ಷಿತವಾಗಿ ಬಿಡುಗಡೆಯಾಗಬೇಕೆನ್ನುವ ಉದ್ದೇಶದಿಂದ ಕರ್ನಾಟಕದಲ್ಲಿನ ಎಲ್ಲಾ ಪ್ರತಿಪಕ್ಷದವರು ರಚನಾತ್ಮಕವಾದಂಥ ಸಹಕಾರವನ್ನು

ಯಾವಾಗಲೂ ಸರ್ಕಾರಕ್ಕೆ ಕೊಟ್ಟುಕೊಂಡು ಬಂದಿದ್ದು ಇವತ್ತು ಎಲ್ಲರಿಗೂ ಗೊತ್ತಿರುವಂಥ ವಿಷಯವಾಗಿದೆ. ಹಲವಾರು ಬಾರಿ ನಮ್ಮ ಶಾಸಕರೆಲ್ಲ ಇದರ ಬಗ್ಗೆ ಸದನದಲ್ಲಿ ಬಹಿರಂಗವಾಗಿ ಚರ್ಚೆಗೆ ಅವಕಾಶ ಮಾಡಿ ಕೊಡಬೇಕೆನ್ನುವ ಸಂದರ್ಭದಲ್ಲಿ ಸಹಿತ ಒಂದು ಒಳ್ಳೆಯ ಸಂಪ್ರದಾಯವನ್ನು ಇಟ್ಟುಕೊಂಡು ಹೋಗಬೇಕೆನ್ನುವ ದೃಷ್ಟಿಯಿಂದ ಬಹಳ ಬ್ಯಾಲೆನ್ಸ್ ಆಗಿ ನಾವು ಸದನದಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿಕೊಂಡು ಬಂದಿದ್ದೇವೆ. ಆದರೆ ನಿನ್ನೆಯ ಘಟನಾವಳಿಗಳನ್ನು ನಾವು ನೋಡಿದರೆ ತಮಿಳುನಾಡಿನ ಮುಖ್ಯಮಂತ್ರಿಗಳಾದ ಮಾನ್ಯ ಕರುಣಾನಿಧಿಯವರು .....

ಅಧ್ಯಕ್ಷರು : ಬೇರೆ ವಿಧಾನಸಭೆಯಲ್ಲಿ ನಡೆದಿರತಕ್ಕಂಥಾದ್ದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ನಾನು ಅಲೋ ಮಾಡುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ತಮಿಳುನಾಡು ವಿಧಾನಸಭೆಯಲ್ಲಿ ಏನಾಯಿತೆಂದು ಅದರ ಬಗ್ಗೆ ನಾನು ಮಾತನಾಡುವುದಿಲ್ಲ ಮತ್ತು ಇಲ್ಲಿಯವರೆಗೆ ಆ ಬಗ್ಗೆ ಮಾತನಾಡಿಲ್ಲ. ನಾನು ಇಲ್ಲಿ ಪ್ರಸ್ತಾಪ ಮಾಡುವಂಥಾದ್ದು ಏನೆಂದರೆ, ಇಲ್ಲಿಯವರೆಗೂ ನಮ್ಮ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ಮತ್ತು ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿಗಳ ಮಧ್ಯೆ ಬಹಳ ಒಳ್ಳೆಯ ಸಹಕಾರ ಇತ್ತು. ಆದರೆ ಈಗ ಏಕೋ "ಎಲ್ಲಾ ತಪ್ಪು ಕರ್ನಾಟಕ ಸರ್ಕಾರದ್ದು" ಅನ್ನುವ ರೀತಿಯಲ್ಲಿ ಅವರ ವಿಧಾನಸಭೆಯಲ್ಲಿ ಶ್ರೀ ಕರುಣಾನಿಧಿಯವರು ಹೇಳಿದ್ದಾರೆ ಎನ್ನುವ ವರದಿ ಪತ್ರಿಕೆಯಲ್ಲಿ ಬಂದಿದೆ. ಇವತ್ತಿನ ಸರ್ಕಾರ ಇರಬಹುದು ಅಥವಾ ಹಿಂದಿನ ಸರ್ಕಾರ ಇರಬಹುದು, ಹಿಂದಿನ ಸರ್ಕಾರದ ಮುಖ್ಯಮಂತ್ರಿಗಳ ಬಗ್ಗೆ ಕೂಡ ಕೆಲವೊಂದು ಪ್ರಸ್ತಾಪ ಬಂದಿದೆ. ಸದರಿ ಇಶ್ಯೂ ಅನ್ನು ರಿಜಾಲ್ವ್ ಮಾಡಲಿಕ್ಕೆ ಸಹಕಾರ ಮತ್ತು ಕೋ-ಆರ್ಡಿನೇಷನ್ ಎರಡೂ ಕಡೆಯಿಂದ ಬೇಕಾಗುತ್ತದೆ. ಆದ್ದರಿಂದ ಎರಡೂ ಕಡೆಯ ರಿಲೇಷನ್‌ಶಿಪ್‌ನಲ್ಲಿ ಏನಾದರೂ ಫೇಲ್ ಆಗಿದೆಯೇ ಹೇಗೆ? ಈ ಇಶ್ಯೂವನ್ನು ರಿಜಾಲ್ವ್ ಮಾಡಲಿಕ್ಕೆ ಸಬ್‌ಸಿಕ್ವೆಂಟ್ ಆಗಿ ಡೆವಲಪ್‌ಮೆಂಟ್ಸ್ ಏನು ಆಗುತ್ತಿದೆ? ಸುಪ್ರೀಂ ಕೋರ್ಟಿನಲ್ಲಿ ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕೇಸ್ ಇದ್ದಂಥ ಸಂದರ್ಭದಲ್ಲಿ ಎರಡೂ ರಾಜ್ಯ ಸರ್ಕಾರಗಳು ಬಹಳ ಒಳ್ಳೆಯ ರೀತಿಯಿಂದ ಸಹಕಾರದಿಂದ ಫೈಟ್ ಮಾಡಿದರು, ಓಡಾಟ ಮಾಡಿದರು. ಸುಪ್ರೀಂ ಕೋರ್ಟಿನಲ್ಲಿ ಎರಡೂ ಸರ್ಕಾರಗಳ ಮೇಲೆ ಸಾಕಷ್ಟು ಬ್ಲೇಮ್ಸ್, ಅಬ್ಸರ್ವೇಷನ್ಸ್ ಬಂದರೂ ಸಹಿತ ಎರಡೂ ಕಡೆಯವರು ಸಹಕಾರದಿಂದ ಹೋದರು. ಕೆಲವು ಸಣ್ಣಪುಟ್ಟ ತೊಂದರೆಗಳು ಆಗಿರಬಹುದು. ಆದರೆ ನಿನ್ನೆಯ ಬೆಳವಣಿಗೆಯನ್ನು ನೋಡಿದಾಗ ಈ ಒಂದು ಇಶ್ಯೂ ಅನ್ನು ರಿಜಾಲ್ವ್ ಮಾಡಲಿಕ್ಕೆ ಯಾವುದೇ ಅಡೆತಡೆ ಉಂಟಾಗಬಾರದು ಎನ್ನುವುದು ನನ್ನ ಕಳಕಳಿಯಾಗಿದೆ. ಹಾಗೆಯೇ ಶ್ರೀ ನೆಡುಮಾರನ್ ಮತ್ತು ಶ್ರೀ ಗೋಪಾಲನ್ ಅವರ ನಡುವೆ ಸ್ವಲ್ಪ ಮನಸ್ತಾಪ ಆಗಿರುವಂಥಾದ್ದು, ಇವೆಲ್ಲ ಕಂಡುಬರುತ್ತಿರುವುದರಿಂದ ಇಂಥ ಅಪಸ್ವರಗಳು ಉಂಟಾಗದಂತೆ ಆಗಬೇಕು. ಈ ಪ್ರಾಬ್ಲಮ್ ಬಹಳ ಒಳ್ಳೆಯ ರೀತಿಯಲ್ಲಿ ರಿಜಾಲ್ವ್ ಆಗಬೇಕು, ಎರಡೂ ಸರ್ಕಾರಗಳ ನಡುವೆ ಕೋ-ಆರ್ಡಿನೇಷನ್ ಇರಬೇಕು, ಈ ರೀತಿಯ ಹೇಳಿಕೆಗಳು ತಮಿಳುನಾಡಿನ ಮುಖ್ಯಮಂತ್ರಿಗಳಿಂದ ಬಂದಿದ್ದನ್ನು ಇವತ್ತು ನಾವು ಏನು ಓದಿದ್ದೇವೆ, ಆ ರೀತಿ ಅದು ಆಗಬಾರದು. ರಿಲೇಷನ್ಸ್ ಕೆಡಲಿಕ್ಕೆ ಇದು ಕಾರಣ ಆಗಬಾರದು. ಈ ಒಂದು ಸಮಸ್ಯೆ ಡೆಲಿಕೇಟ್ ಆಗಲಿಕ್ಕೆ ಇವೆಲ್ಲ ಕಾರಣವಾಗುತ್ತವೆ. ಆದ್ದರಿಂದ ಇದನ್ನು ಒಳ್ಳೆಯ

ರೀತಿಯಿಂದ, ಸಾವಧಾನದಿಂದ ಬಗೆಹರಿಸುವುದಕ್ಕೆ ರಾಜ್ಯ ಸರ್ಕಾರದಿಂದ ಏನು ಪ್ರಯತ್ನ ಮಾಡಲಾಗುತ್ತಿದೆ ಎನ್ನುವ ಸ್ಪಷ್ಟೀಕರಣ ಮಾನ್ಯ ಮುಖ್ಯಮಂತ್ರಿಗಳಿಂದ ಮತ್ತು ಮಾನ್ಯ ಗೃಹ ಮಂತ್ರಿಗಳಿಂದ ಇದರ ಬಗ್ಗೆ ಬೆಳಕು ಚೆಲ್ಲುವಂಥಾದ್ದು ಆಗಬೇಕು.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಬಾರದು ಎನ್ನುವ ಉದ್ದೇಶವನ್ನು ನಾನು ಇಟ್ಟುಕೊಂಡಿದ್ದೆ. ಕಾರಣವೇನೆಂದರೆ, ಡಾ॥ ರಾಜ್‌ಕುಮಾರ್ ಅವರ ಅಪಹರಣದ ವಿಚಾರದಲ್ಲಿ ಈ ಸದನದಲ್ಲಿ ಈ ಅಧಿವೇಶನ ಮುಗಿಯಲಿಕ್ಕೆ ಮುನ್ನ ನಾವು ಧೀರ್ಘವಾಗಿ ಚರ್ಚೆ ಮಾಡೋಣ ಎನ್ನುವ ಒಪ್ಪಿಗೆಯನ್ನು ಮಾನ್ಯ ಸಭಾನಾಯಕರು ಕೊಟ್ಟಿದ್ದಾರೆ ಮತ್ತು ತಾವು ಸಹಿತ ಒಪ್ಪಿಗೆಯನ್ನು ಕೊಟ್ಟಿದ್ದೀರಿ. ಇದನ್ನು ಚರ್ಚೆ ಮಾಡುವುದಕ್ಕೆ ಸರ್ಕಾರ ಯಾವಾಗಲೂ ಸಹಿತ ಸಿದ್ಧವಾಗಿದೆ ಎನ್ನುವುದನ್ನು ಅವರು ಹೇಳಿದ್ದಾರೆ. ಅದನ್ನು ತಾವು ಚರ್ಚೆ ಮಾಡಬೇಕಾಗುತ್ತದೆ. ಇವತ್ತು ನಡೆಯತಕ್ಕಂಥ ಬ್ಯುಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದನ್ನು ನಾವು ಚರ್ಚೆ ಮಾಡೋಣ. ಅದಕ್ಕೆ ಮುಂಚೆ ತಮಿಳುನಾಡು ಮುಖ್ಯಮಂತ್ರಿಗಳು ಹೇಳಿರತಕ್ಕಂಥ ವಿಚಾರದಲ್ಲಿ, ತಮಿಳುನಾಡಿನ ಮುಖ್ಯಮಂತ್ರಿಗಳ ರಾಗದಲ್ಲಿ (ಹೇಳಿಕೆ) ಆಗಿರತಕ್ಕಂಥ ಬದಲಾವಣೆ ಬಗ್ಗೆ ನಾನು ಒಂದೆರಡು ಮಾತನ್ನು ಹೇಳಬೇಕಾಗುತ್ತದೆ. ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಕರ್ನಾಟಕದ ಆಸ್ತಿ ವೀರಪ್ಪನ್‌ನಂಥ ಕ್ರೂರನ ಕೈಯಲ್ಲಿ ಇದೆಯೆನ್ನುವ ಅರಿವನ್ನು ಇಟ್ಟುಕೊಂಡು, ಸರ್ಕಾರ ಮಾಡುತ್ತಿರುವ, ಇಡತಕ್ಕಂಥ ಹೆಜ್ಜೆಗಳ ಅರಿವನ್ನು ಸಹ ಗಮನದಲ್ಲಿಟ್ಟುಕೊಂಡು ನಾನು ಮಾತನಾಡಲಿಕ್ಕೆ ಬಯಸುತ್ತೇನೆ. 1994ರಲ್ಲಿ ನಮ್ಮ ಸರ್ಕಾರ ಅಡಳಿತಕ್ಕೆ ಬಂದಾಗ ಶ್ರೀಮಾನ್ ದೇವೇಗೌಡರ ಸರ್ಕಾರದಲ್ಲಿ ನಾನು ಸುಮಾರು 2 ವರ್ಷಗಳ ಕಾಲ ಗೃಹ ಇಲಾಖೆಯ ಮಂತ್ರಿಯಾಗಿ ಮತ್ತು ಶ್ರೀ ಜೆ.ಹೆಚ್. ಪಟೇಲರು ಮುಖ್ಯಮಂತ್ರಿ ಆಗಿದ್ದಾಗ 6 ತಿಂಗಳ ಕಾಲ ಕೆಲಸ ಮಾಡಿದ್ದೇನೆ. ಕುಮಾರಿ ಜಯಲಲಿತ ಅವರು ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮತ್ತು ನಾವೆಲ್ಲ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ವೀರಪ್ಪನ್ ಕಾರ್ಯಾಚರಣೆ ಬಗ್ಗೆ ಸಾಕಷ್ಟು ಚರ್ಚೆಗಳನ್ನು ಸಹಿತ ನಾವು ಮಾಡಿದ್ದೇವೆ. ಆ ಚರ್ಚೆ ಬಹಳ ಫಲಪ್ರದವಾಗಿತ್ತು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆದರೆ ಈಗ ಯಾವ ಕಾರಣದಿಂದ ಶ್ರೀ ಕರುಣಾನಿಧಿಯವರು - 'ಕರ್ನಾಟಕ ಸರ್ಕಾರ ಇದಕ್ಕೆ ಕಾರಣ' ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಎನ್ನುವುದು ನನಗೆ ಇನ್ನೂ ಅರ್ಥವಾಗಿಲ್ಲ. ಅವರು ಈ ಒಂದು ಹೇಳಿಕೆ ಬಹಳ ಆಶ್ಚರ್ಯಕರವಾಗಿರತಕ್ಕಂಥ ವಿಚಾರ. 1997ನೇ ಇಸವಿಯಲ್ಲಿ ಅರಣ್ಯ ಇಲಾಖೆಯ ಕೆಲವು ಅಧಿಕಾರಿಗಳನ್ನು ಅಥವಾ ನೌಕರರನ್ನು ವೀರಪ್ಪನ್ ಅಪಹರಿಸಿದಂಥ ಸಂದರ್ಭದಲ್ಲಿ ಆದಂಥ ಮಾತುಕತೆಗಳು, ಆ ಸಂದರ್ಭದಲ್ಲಿ ವೀರಪ್ಪನ್‌ಗೆ ಆಮ್ನೆಸ್ಟಿ ಕೊಡತಕ್ಕಂಥದ್ದು, ಮತ್ತು ಕರ್ನಾಟಕದಲ್ಲಿರತಕ್ಕಂಥ ಟಾಡಾ ಬಂದಿಗಳನ್ನು ರಿಲೀಸ್ ಮಾಡತಕ್ಕಂಥಾದ್ದರ ಬಗ್ಗೆ ಆಗಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀ ಜೆ.ಹೆಚ್. ಪಟೇಲರು ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಮಾತುಕತೆ ನಡೆಸಿದ್ದಾರೆ. ಆ ಸಂದರ್ಭದಲ್ಲಿ ಆಗಿರುವುದನ್ನು ನಾನು ರೀಕಲೆಕ್ಟ್ ಮಾಡಿಕೊಂಡಿರುವ ಹಾಗೆ ಹೇಳುವುದಾದರೆ, joint decision of the Governments of Karnataka and Tamil Nadu regarding Veerappan after the

joint meeting and also after the deliberations of both the Chief Ministers ನಾವು ಸುಮಾರು 8 ವಿಚಾರಗಳಿಗೆ ಒಪ್ಪಿಗೆಯನ್ನು ಕೊಟ್ಟೆವು. Both the State Governments accepted the offer of surrender of Veerappan and his associates and assured protection to their lives. I am underlining the words ``accepted the offer of surrender of Veerappan".

Veerappan and his associates will be kept in a special camp in Tamil Nadu awarded by police and jail authorities;

The period of confinement of Veerappan and his associates in the special camp will be minimum as per law.

All persons who have been arrested in connection with the investigation of Veerappan cases will be released if there are no specific charges against them.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಚರ್ಚೆ ಯಾವತ್ತಾದರೂ ಒಂದು ದಿವಸ ಆಗಬೇಕಾಗುತ್ತದೆ. ಡಾ।। ರಾಜ್‌ಕುಮಾರ್ ಅವರ ಬಿಡುಗಡೆ ಆದಮೇಲೆ ಈ ಚರ್ಚೆಯನ್ನು ಮುಂದುವರಿಸಬಹುದೆಂದು ನಾವು ಈಗಾಗಲೇ ಅಂತರಂಗಿಕವಾಗಿ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ. ತಮಿಳುನಾಡು ವಿಧಾನಸಭೆಯಲ್ಲಿ ಅಲ್ಲಿಯ ಮಾನ್ಯ ಮುಖ್ಯಮಂತ್ರಿಗಳು ಯಾವ ಹಿನ್ನೆಲೆಯಲ್ಲಿ ಈ ಹೇಳಿಕೆಯನ್ನು ಮಾಡಿದ್ದಾರೋ ಅದು ನಮಗೆ ಗೊತ್ತಿಲ್ಲ. ಅದರ ಪೂರ್ತಿ ಪಠಣ ಕೂಡ ನಮ್ಮ ಕೈಗೆ ಸೇರಿಲ್ಲ. ಆ ಪೂರ್ತಿ ಪಠಣವನ್ನು ತಮಿಳುನಾಡು ಶಾಸನಸಭೆಯಿಂದ ತರಿಸಿಕೊಳ್ಳುವುದು, ತರಿಸಿಕೊಂಡ ಮೇಲೆ ನಮ್ಮಗೆಲ್ಲರಿಗೂ ಆ ಪೂರ್ತಿ ಪಠಣವನ್ನು ತಲುಪಿಸಿದ ಮೇಲೆ ಬಹುಶಃ ಮಾನ್ಯ ಸಿಂಧ್ಯಾ ಅವರು ಇದರ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುವುದಕ್ಕೆ ಅವಕಾಶ ಸಿಗುತ್ತದೆ. ಅಲ್ಲಿಯವರೆಗೆ ನಾವ್ಯಾರೂ ಇದರ ಬಗ್ಗೆ ವಿಶ್ಲೇಷಣೆ ಮಾಡುವಂಥಾದ್ದಿಲ್ಲ. We are poised at such a point where people are in the process of going into the jungle. ತಾವು ಆಗಲೇ, ಹೇಳಿದ ಹಾಗೆ ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಬೇಡ.

ಶ್ರೀ ಸಿ. ಬೈರೇಗೌಡ : ನಮ್ಮ ನಾಯಕರು ಈಗ ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆಂದರೆ, ಇವತ್ತು ದೇಶದ ಎಲ್ಲಾ ಪತ್ರಿಕೆಗಳಲ್ಲಿಯೂ ಸಹ ನಮ್ಮ ಸರ್ಕಾರವಿದ್ದ ಕಾಲದಲ್ಲಿ ಏನೋ ಅಪರಾಧ ಮಾಡಿದ್ದೇವೆಂಬ ಅರ್ಥ ಬರುವ ರೀತಿಯಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳ ಹೇಳಿಕೆ ವರದಿಯಾಗಿದೆ. ನಾವು ಐದು ವರ್ಷಗಳ ಕಾಲ ಸರ್ಕಾರ ನಡೆಸಿದ್ದೇವೆ. ಆ ಐದು ವರ್ಷಗಳಲ್ಲಿ ನಾವೇನು ಮಾಡಿದ್ದೇವೆ, ನಮ್ಮಿಂದ ತಪ್ಪಾಗಿದೆಯೇ, ಇಲ್ಲವೇ ಎಂಬುದರ ತೀರ್ಮಾನವನ್ನು ಜನತೆಗೆ ಬಿಡಬೇಕಾಗಿದೆ. Single-sided information has been fed to the people, we have to correct it. ಮೊದಲಿನಿಂದಲೂ ಚರ್ಚೆಗೆ ತಾವು ಒಪ್ಪಿದ್ದೀರಿ. ಚರ್ಚೆಯಾಗಬೇಕೆಂಬುದು ನಮ್ಮೆಲ್ಲರ ಬಯಕೆಯಾಗಿದೆ. ನಾನಿಲ್ಲಿ ಬಹಿರಂಗವಾಗಿ ಹೇಳಲು ಇಷ್ಟವಿಲ್ಲದಿದ್ದರೂ ಕೆಲವು ಮುಖ್ಯವಾದ

ಘಟನಾವಳಿಗಳು ನಡೆಯುವ ಸಂಭವವಿದೆ ಎನ್ನುವ ಅರಿವು ನಮಗಿದೆ. ಅದ್ಯಾವುದಕ್ಕೂ ಅಡ್ಡಿಪಡಿಸುವ ಇರಾದೆ ನಮಗಿಲ್ಲ, ಅಡ್ಡಿಪಡಿಸಲೂ ಬಾರದು. ನಾವು ಅದನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದೇವೆ. ಹಿಂದೆ ಇದ್ದ ನಮ್ಮ ಸರ್ಕಾರದ ಮೇಲೆ ಆಪಾದನೆ ಹೊರಿಸುವ ರೀತಿಯಲ್ಲಿ ಒಂದು ಕಡೆಯಿಂದ ಹೇಳಿಕೆ ಬಂದರೆ, ನಾವು ನಿಜಾಂಶಗಳನ್ನು ಜನತೆಯ ಮುಂದಿಡಬೇಕಾದ ಕರ್ತವ್ಯ ನಮ್ಮದಿದೆ ಎನ್ನುವ ಕಾರಣಕ್ಕೋಸ್ಕರ ಮಾತ್ರ ನಮ್ಮ ನಾಯಕರು, ಈ ವಿಚಾರವನ್ನು ಪ್ರಸ್ತಾಪಿಸುತ್ತಿದ್ದಾರೆ. ಯಾವ ರೀತಿಯಾಗಿ ನಾವು ಹೆಜ್ಜೆಗಳನ್ನಿಡುತ್ತಿದ್ದೇವೆ ಎನ್ನುವುದನ್ನು ಅವರು ಪ್ರಾರಂಭದಲ್ಲಿಯೇ ಹೇಳಿದ್ದಾರೆ. ಆ ಇತಿಮಿತಿಯಲ್ಲಿ ಅವರು ಸ್ವಲ್ಪ ಹೇಳಬೇಕಾದ ಅವಶ್ಯಕತೆ ಇದೆ. ನಿಮ್ಮ ಮೇಲೆ ಗೂಬೆ ಕೂರಿಸುವ ಪ್ರಯತ್ನವೇನು ನಡೆದಿದೆ, ಅದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟರೆ ಸದನದಲ್ಲಿಯಾಗಲಿ ಅಥವಾ ಹೊರಗಡೆಯಾಗಲಿ ಸತ್ಯವನ್ನು ಜನತೆಯ ಮುಂದಿಡಬೇಕಾಗಿರುವುದು ನಮ್ಮ ಕರ್ತವ್ಯವೆಂಬುದಾಗಿ ನಾನು ಭಾವಿಸಿದ್ದೇನೆ. ಏಕೆಂದರೆ, ನಾವು ಐದು ವರ್ಷಗಳು ಆ ಜವಾಬ್ದಾರಿಯನ್ನು ಹೊತ್ತಿದ್ದು, ಆ ಜವಾಬ್ದಾರಿಯನ್ನು ಯಾವ ರೀತಿ ಹೊತ್ತಿದ್ದೆವು ಎಂಬುದನ್ನು ಜನರ ಗಮನಕ್ಕೆ ತರುವ ಅವಶ್ಯಕತೆ ಇದೆ ಎಂಬುದು ನಮ್ಮ ಭಾವನೆಯಾಗಿದೆ.

ಶ್ರೀ ಬಿ. ಸೋಮಶೇಖರ್ : ನಾವು ಎಷ್ಟೇ ತಾಳ್ಮೆಯಿಂದಿದ್ದರೂ ತಮಿಳುನಾಡು ವಿಧಾನಸಭೆಯಲ್ಲಿ ಅಥವಾ ಬೇರೆ ಬೇರೆ ಪತ್ರಿಕೆಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ವಿಚಾರಗಳು ಬರುತ್ತಿವೆ. ಪ್ರತಿಯೊಂದು ಹಂತದಲ್ಲಿಯೂ ನಮ್ಮ ನಾಯಕರು ಸರ್ಕಾರಕ್ಕೆ ಸಹಕಾರವನ್ನು ಕೊಡುತ್ತಾ ಬಂದಿದ್ದಾರೆ. ನಿನ್ನೆ ನಡೆದ ಘಟನೆಯಲ್ಲಿ ಅದು ಹೇಗೋ ಹಿಂದಿನ ಸರ್ಕಾರವೇನೋ ತಪ್ಪು ಮಾಡಿದೆ ಎನ್ನುವ ಭಾವನೆಯಲ್ಲಿ ತಮಿಳುನಾಡಿನ ವಿಧಾನಸಭೆಯಲ್ಲಿ ನಿಲುವಳಿ ಸೂಚನೆ ಮಂಡನೆ ಮಾಡುವ ಸಂದರ್ಭದಲ್ಲಿ ಮೂರು ಗಂಟೆಗಳ ಕಾಲ ಚರ್ಚೆ ಮಾಡಿದ್ದಾರೆ. ಈ ಸದನವನ್ನು ನಾವು ಒಂದು ತಿಂಗಳಿನಿಂದ ನಡೆಸುತ್ತಿದ್ದೇವೆ. ಸುಪ್ರೀಂ ಕೋರ್ಟಿನಲ್ಲಿ ಈ ವಿವಾದವಿರುವುದರಿಂದ, ಸದ್ಯಕ್ಕೆ ಚರ್ಚೆ ಮಾಡುವುದು ಬೇಡ, ಅಲ್ಲಿ ತೀರ್ಮಾನವಾದ ನಂತರ, ಚರ್ಚೆ ಮಾಡೋಣವೆಂದು ತಾವು ಹೇಳಿದ್ದೀರಿ, ಅದಕ್ಕೆ ಅವಕಾಶ ಕೊಟ್ಟಿದ್ದೀರಿ. ಸುಪ್ರೀಂ ಕೋರ್ಟಿನ ತೀರ್ಪು ಬಂದಾಗಿದೆ. ಇವತ್ತು ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ, ಇದು ಒಂದಿಲ್ಲೊಂದು ದಿನ ಚರ್ಚೆಯಾಗಬೇಕು, ಡಾ||ರಾಜ್‌ಕುಮಾರ್‌ರವರ ಬಿಡುಗಡೆಯಾದ ಮೇಲೆ ಚರ್ಚೆಗೆ ಅವಕಾಶವಾಗಬಹುದೆನ್ನುವ ವಿಚಾರವನ್ನು ಸೂಕ್ಷ್ಮವಾಗಿ ಹೇಳಿದರು. ಇದರರ್ಥ ಏನೆಂದರೆ, ಡಾ|| ರಾಜ್‌ಕುಮಾರ್‌ರವರ ಬಿಡುಗಡೆ ಈ ಅಧಿವೇಶನ ಮುಗಿಯುವ ವೇಳೆಗೆ ಆಗುತ್ತದೆಂಬ ಬಗ್ಗೆ ಯಾರಿಗೂ ಗೊತ್ತಿಲ್ಲ. ಅವರು ಬಿಡುಗಡೆಯಾದರೆ ಸಂತೋಷ. ಒಂದು ವೇಳೆ, ಅವರು ಬಿಡುಗಡೆಯಾಗದಿದ್ದರೆ, ತಮಿಳುನಾಡಿನಲ್ಲಿ ಹಿಂದಿನ ಸರ್ಕಾರದ ಮೇಲೆ ದೋಷಾರೋಪಣೆ ಎತ್ತಿದಾಗ ನಮ್ಮ ಪರಿಸ್ಥಿತಿ ಏನಾಗುತ್ತದೆ? ಅಬ್ದುಲ್ ಕರೀಂರವರು ಟಾಡಾ ಡಿಟೆನ್ಯೂಸ್ ಅನ್ನು ಬಿಡುಗಡೆ ಮಾಡಬಾರದೆಂದು ಆಪಾದನೆಯನ್ನು ಎತ್ತಿದ ನಂತರ, ಸುಪ್ರೀಂ ಕೋರ್ಟಿನಲ್ಲಿ ಕರ್ನಾಟಕ ಮತ್ತು ತಮಿಳುನಾಡಿನ ಸರ್ಕಾರಗಳು ಅಫಿಡವಿಟ್ ಸಲ್ಲಿಸಿದವು. ಆಗ ತಮಿಳುನಾಡು ಸರ್ಕಾರದವರು ಯಾವುದೇ ಒಂದು ಅಫಿಡವಿಟ್ ಸಲ್ಲಿಸಲಿಲ್ಲ. ಇದು ಬಹಳ ಸೂಕ್ಷ್ಮವಾದ ವಿಚಾರ. ಟಾಡಾ ಡಿಟೆನ್ಯೂಸ್ ಬಿಡುಗಡೆ ಮಾಡುವುದಕ್ಕೆ ಹಿಂದಿನ ಸರ್ಕಾರ ಒಪ್ಪಿರಲಿಲ್ಲವೆಂದು ನಿನ್ನೆ ದಿನ ತಮಿಳುನಾಡಿನ

ವಿಧಾನಸಭೆಯಲ್ಲಿ ಶ್ರೀ ಕರುಣಾನಿಧಿಯವರು ಏನು ಹೇಳಿದ್ದಾರೆ, ಅದೇ ಅಫಿಡವಿಟ್ ಅನ್ನು ಅವರು ಸುಪ್ರೀಂ ಕೋರ್ಟಿನಲ್ಲಿ ಸಲ್ಲಿಸಲಿಲ್ಲ. ಆ ವಿಚಾರದ ಬಗ್ಗೆ ಚಕಾರವೆತ್ತಲಿಲ್ಲ. ಬೇರೆ ಕಾರಣವನ್ನು ಎತ್ತಿದರು. ಸುಪ್ರೀಂ ಕೋರ್ಟು ಛೀಮಾರಿ ಹಾಕಿದ ಮೇಲೆ ತನ್ನ ಒಂದು ಚರ್ಮವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೋಸ್ಕರ ಇವತ್ತು ಹಿಂದಿನ ಸರ್ಕಾರ, ಟಾಡಾ ಬಂಧಿಗಳ ಬಿಡುಗಡೆ ಮಾಡಲಿಲ್ಲವೆಂದು ಹೇಳಿದಾಗ ನಾವು ಸುಮ್ಮನೆ ಕುಳಿತುಕೊಳ್ಳಲಾಗುವುದಿಲ್ಲ. ಅದರಿಂದಾಗಿ, ನಮ್ಮ ನಾಯಕರು ಇದನ್ನು ಹೇಳುತ್ತಿದ್ದಾರೆ. ಹಿಂದೆ ಯಾವ ಒಪ್ಪಂದವಾಗಿದೆ? ತಮಿಳುನಾಡಿನ ಸರ್ಕಾರ ಎಡವಿದೆಯೇ? ಈ ಸರ್ಕಾರ ಎಡವಿದೆಯೇ? ಕರೆಸ್ಪಾಂಡೆನ್ಸ್ ಏನಾಗಿದೆ? ಎಂಬುದರ ವಿಚಾರಗಳನ್ನು ಸದನದ ಮುಂದಿಡಬೇಕಾಗುತ್ತದೆ. ನಾವು ತಪ್ಪು ಮಾಡಿದ್ದರೆ ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ, ನಾವು ಡಿಫೆಂಡ್ ಮಾಡಬೇಕಾಗುತ್ತದೆ. ತಮಿಳುನಾಡು ಸರ್ಕಾರದವರು ನಮ್ಮ ಹಿಂದಿನ ಸರ್ಕಾರದ ಮೇಲೆ ದೋಷಾರೋಪಣೆ ಮಾಡಿರುವ ಹಿನ್ನೆಲೆಯಲ್ಲಿ ಈ ಚರ್ಚೆಗೆ ಸಂಪೂರ್ಣ ಅವಕಾಶ ಕೊಡಬೇಕೆಂಬುದು ನನ್ನ ವಾದವಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ಇವತ್ತು ನಾವು ಅತ್ಯಂತ ಗಂಭೀರವಾದ ವಿಚಾರದ ಬಗ್ಗೆ ಪ್ರಸ್ತಾಪಿಸುತ್ತಿದ್ದೇವೆ. ತಾವು ಸೂಕ್ಷ್ಮವಾಗಿ ಹೇಳಿದ ರೀತಿಯಲ್ಲಿ, ನಮ್ಮ ನೆರೆ ರಾಜ್ಯದ ವಿಧಾನಸಭೆಯಲ್ಲಿ ಚರ್ಚೆಯಾದ ವಿಚಾರಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಇಚ್ಛಿಪಡುವುದಿಲ್ಲ. ಸಾಧಾರಣವಾಗಿ ಪರಿಸ್ಥಿತಿ ನಮ್ಮ ಕೈ ಮೀರಿದೆ ಎಂಬ ಭಾವನೆ ಜನರಲ್ಲಿ ಬಂದಿದೆ. ಎರಡು, ಮೂರು ಸ್ಪಷ್ಟವಾದ ವಿಚಾರಗಳನ್ನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಲು ಹೇಳಲು ಬಯಸುತ್ತೇನೆ. ಸಂಧಾನವೇ ಸೂಕ್ತವೆಂದು ಹೇಳುವ ತೀರ್ಮಾನವನ್ನು ಕರ್ನಾಟಕ ರಾಜ್ಯದ ಎಲ್ಲ ಜನತೆಯ, ಎಲ್ಲ ಆಡಳಿತದವರು ಹಿಂದಿನಿಂದ ಮಾಡಿಕೊಂಡು ಬಂದಿದ್ದೇವೆ. ಸುಪ್ರೀಂ ಕೋರ್ಟಿನ ತೀರ್ಪು ಬಂದ ನಂತರವೂ, ಸಂಧಾನವೆಂದು ಹೇಳಿ ಮುಂದುವರಿದರೆ, ತಾಳ್ಮೆಗೆ ಮಿತಿ ಇಲ್ಲವೆ ಎಂದು ಇವತ್ತು ಜನರು ಮಾತನಾಡಲು ಶುರು ಮಾಡಿದ್ದಾರೆ. ಬೇರೆ ಬೇರೆ ಪತ್ರಿಕೆಗಳಲ್ಲಿ ಬರುವ ಹೇಳಿಕೆಗಳ ಮೂಲಕ ಪರಿಸ್ಥಿತಿ ಸ್ವಲ್ಪ ಕ್ಲಿಷ್ಟವಾಗಿದೆ. ಸಂಧಾನಕಾರರ ಮಧ್ಯದಲ್ಲಿ ಬಿಕ್ಕಟ್ಟಾಗಿದೆ. ಸಂಧಾನಕಾರರು ಏನು ಮಾಡುತ್ತಾರೆಂಬುದು ಗೊತ್ತಿಲ್ಲ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು, ಕಳೆದ ಬಾರಿ ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದಾಗ, ನಮಗೆ ಸುಪ್ರೀಂ ಕೋರ್ಟಿನ ತೀರ್ಪು ಹೀಗೇ ಬರಬಹುದೆಂದು ನಿರೀಕ್ಷಿಸಲಾಗುತ್ತೆಂದು ಸೂಚ್ಯವಾದ ವಿಚಾರಗಳನ್ನು ಇಲ್ಲಿ ಹೇಳಿದರು. ಆದರೆ ಸುಪ್ರೀಂ ಕೋರ್ಟಿನ ತೀರ್ಪು ಬಂದು 15 ದಿವಸಗಳಾಯಿತು. ಸ್ಪೀಡ್-ಅಪ್ ಏಕೆ ಆಗುತ್ತಿಲ್ಲ? ಸುಪ್ರೀಂ ಕೋರ್ಟಿನ ಡಿಸಿಷನ್ ನಂತರ, ಕರ್ನಾಟಕ ಸರ್ಕಾರ ನಿರೀಕ್ಷಿಸಿದ ಸ್ಪೀಡ್‌ನಲ್ಲಿ ಹೋಗುತ್ತಿಲ್ಲವೆನ್ನುವ ಅಪನಂಬಿಕೆ ರಾಜ್ಯದ ಜನರಿಗೆ ಬರಲು ಶುರುವಾಗಿದೆ. ಒಂದು ಕಡೆಯಿಂದ ಇವತ್ತು ಸತ್ಯಮಂಗಲ ಕಾಡಿನ ಪಕ್ಕದಲ್ಲಿ ಶ್ರೀ ನೆಡುಮರನ್‌ರವರು ಶ್ರೀ ಆರ್.ಆರ್. ಗೋಪಾಲ್‌ಗೋಸ್ಕರ ಕಾಯುತ್ತಿದ್ದಾರೆ. ಆರ್.ಆರ್. ಗೋಪಾಲ್ ತಮ್ಮ ಕಛೇರಿಯಲ್ಲಿ ಕುಳಿತು, ತಮಗೇನೂ ಮೇಸೇಜ್ ಬರಲಿಲ್ಲ, ಹೀಗಾಗಿ ಹೊರಡಲಾಗಲಿಲ್ಲವೆಂದು ಹೇಳುತ್ತಿದ್ದಾರೆ. ಇವರಲ್ಲೇನಾದರೂ ಸಾಮರಸ್ಯದ ಕೊರತೆ ಇದೆಯೇ? ಇದರಲ್ಲೇನಾದರೂ ತೊಂದರೆಯಾಗಿದೆಯೇ? ಎಂಬುದು ಜನರಿಗೆ ಗೊತ್ತಾಗಬೇಕು.

(ಗೊಂದಲ)

ಶ್ರೀ ಸಿ. ಬೈರೇಗೌಡ : ತಾವು ಇದನ್ನು ಪ್ರಸ್ತಾಪಿಸಬೇಡಿ ಎಂದು ನಾನು ಹೇಳಲಿಲ್ಲ. ಈಗ ಇರುವ ವಿಚಾರ ಬೇರೆ ಇದೆ.

ಶ್ರೀ ಡಿ.ವಿ. ಸದಾನಂದ ಗೌಡ : ಈ ರೀತಿ ಇಡೀ ಒಂದು ಸಂಶಯಕ್ಕೆ ಆಸ್ಪದವಾದ ವ್ಯವಸ್ಥೆಗಳಿವೆ. ಸಂಧಾನಕಾರರ ಬಗ್ಗೆ ಸರ್ಕಾರಕ್ಕೆ ಯಾವ ಮಾಹಿತಿಗಳು ಬಂದಿವೆ, ಗೋಪಾಲ್, ನೆಡುಮಾರನ್ ಮಧ್ಯದಲ್ಲಿ ವ್ಯತ್ಯಾಸ, ಭಿನ್ನಾಭಿಪ್ರಾಯವಿದೆಯೇ? ಅದರಿಂದಾಗಿ ವಿಳಂಬವಾಗುತ್ತಿದೆಯೇ? ಈ ಸಮಸ್ಯೆಯ ಪರಿಹಾರಕ್ಕೆ ರಾಜಕೀಯ ಪ್ರವೇಶ ಆಗಬಾರದೆಂಬುದು ನಮ್ಮ ಮೂಲಭೂತವಾದ ಉದ್ದೇಶವಾಗಿತ್ತು. ಆದರೆ, ನಿನ್ನೆ ನಡೆದ ಚರ್ಚೆಯ ವಿಚಾರಗಳು, ಇವತ್ತು ಪತ್ರಿಕೆಗಳಲ್ಲಿ ಬಂದ ವರದಿ ನೋಡಿದರೆ, ಇದರಲ್ಲೇನೋ ರಾಜಕಾರಣ ಪ್ರವೇಶವಾಗುತ್ತದೆ, ಇದರಿಂದ ಹಿನ್ನಡೆಯಾಗಬಹುದೆನ್ನುವ ಸಂಶಯ ಜನರಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಹೀಗೇ ಚರ್ಚೆ ಮಾಡುತ್ತಾ ಹೋದರೆ, ಕರೆಸ್ಪಾಂಡೆನ್ಸ್, ಬ್ರೇಕ್ಸ್ ಅವರೇನೋ ಹೇಳಿದರು, ನಾವೇನು ಹೇಳಿದೆವು ಎಂದು ಚರ್ಚೆ ಸಾಗುತ್ತದೆ. ಇದಕ್ಕೆ ನಮ್ಮ ಸರ್ಕಾರದ ಮತಿಯಿಂದ ನಾವೇನೂ ಹೇಳಲಿಲ್ಲ. ನಾವು ಯಾರ ಮೇಲೂ ದೋಷಾರೋಪಣೆ ಮಾಡಿಲ್ಲ. ನಾವು ಕಳವಳ ವ್ಯಕ್ತಪಡಿಸಿದ್ದು, ಕನ್‌ಸರ್ನ್ ಇಟ್ಟಿದ್ದು ಕೇವಲ ಡಾ|| ರಾಜ್‌ಕುಮಾರ್‌ರವರ ಸುರಕ್ಷಿತ ಬಿಡುಗಡೆಯಾಗಬೇಕೆನ್ನುವ ದೃಷ್ಟಿಯಿಂದ. ನಮ್ಮ ಮೇಲೆ ಬಹಳಷ್ಟು ಹೇಳಿಕೆಗಳು ಬಂದರೂ, ಅವೆಲ್ಲವನ್ನೂ ನುಂಗಿಕೊಂಡು ಇದ್ದೇವೆ. ಅದೇ ರೀತಿ ಆ ಅಸೆಂಬ್ಲಿಯಲ್ಲಿ ಹೇಳಿದ ಮಾತುಗಳನ್ನು ಇಲ್ಲಿ ಚರ್ಚೆ ಮಾಡಲು ನಮ್ಮ ಕಾನೂನಿನಲ್ಲಿ ಅವಕಾಶವಿಲ್ಲ. ನೀವು ಅನೇಕ ಮಾತುಗಳನ್ನು ಹೇಳಿಕೊಂಡು ಹೋದಾಗ ಅದಕ್ಕೆ ನಾವು ಉತ್ತರ ಕೊಟ್ಟು, ಮತ್ತೊಂದು ಅದಕ್ಕೆ ವಿವರಣೆ ಕೊಟ್ಟು ನಾವು ಸಮರ್ಥನೆ ಮಾಡಿಕೊಂಡು ಹೋದರೆ ಇಲ್ಲಿ ಏನಾಗುತ್ತದೆಂದರೆ ಎಲ್ಲಾ ವಿವರವಾದ ಚರ್ಚೆಯಾಗಬೇಕಾಗುತ್ತದೆ. ಇದರ ಪರಿಣಾಮ ಹೊರಗಡೆ ಬೀರಬಾರದು ಎನ್ನುವ ದೃಷ್ಟಿಯಿಂದ ತಾಳ್ಮೆಯಿಂದ ನಾವು ಇದ್ದೇವೆ, ಈ ಚರ್ಚೆಗೆ ಹೆದರುವ ಪ್ರಶ್ನೆಯೇ ಇಲ್ಲ, ನಾವೆಂದು ಹೆದರುವುದಿಲ್ಲ. ತಾವು ಹೇಳುವುದನ್ನು ಹೇಳುತ್ತೀರಿ, ನಾವು ಏನು ವಿವರಣೆ ಕೊಡಬೇಕು ಅದನ್ನು ಕೊಡುತ್ತೇವೆ. ಸಮಾಧಾನ ಆದರೆ ಒಳ್ಳೆಯದು ಒಂದು ವೇಳೆ ಸಮಾಧಾನವಾಗದಿದ್ದರೆ ನಮ್ಮ ಉತ್ತರ ನಮ್ಮ ಹತ್ತಿರ ಇರುತ್ತದೆ, ನಿಮ್ಮ ಪ್ರಶ್ನೆ ನಿಮ್ಮ ಹತ್ತಿರ ಇರುತ್ತದೆ. ಇದರ ಬಗ್ಗೆ ನಂತರ ಜನ ತೀರ್ಮಾನಿಸುತ್ತಾರೆ. ಇದಕ್ಕಾಗಿ ಮಾನ್ಯ ಸಿಂಧ್ಯಾರವರು ಸೂಕ್ಷ್ಮವಾಗಿ, ಈ ವಿಚಾರ ತೆಗೆದುಕೊಳ್ಳುವುದು ಬೇಡ ಎನ್ನುವುದೇ ಭಾವನೆ ಇತ್ತು ಶೂನ್ಯವೇಳೆಯಲ್ಲಿ ತಾವು ಇದನ್ನು ಪ್ರಸ್ತಾಪಿಸಿದ್ದಕ್ಕಾಗಿ ಹೇಳಬೇಕಾಗುತ್ತದೆ ಎಂದು ಹೇಳಿದರು. ಸ್ವಾಭಾವಿಕವಾಗಿ ಒಂದು ರಾಜಕೀಯ ಪಕ್ಷದ ಮೇಲೆ ಬಂದಂಥ ಆಪಾದನೆಗಳನ್ನು ಇಲ್ಲಿ ಸಮರ್ಥನೆ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗಿ ಹೇಳಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಸಧ್ಯಕ್ಕೆ ಅವರು ಮಾತನಾಡುವುದು ಬೇಡ, ನಾವು ಅದನ್ನು ಕೇಳುವುದು ಬೇಡ ಎನ್ನುವುದೇ ನನ್ನ ಮನವಿ. ಅದರಲ್ಲೂ ಬೇರೆ ವಿಧಾನಸಭೆಯಲ್ಲಿ ಚರ್ಚೆಯಾಗಿರುವುದನ್ನು ಈ ವಿಧಾನಸಭೆಯಲ್ಲಿ ತೆಗೆದುಕೊಳ್ಳುವುದು ಸೂಕ್ತವಲ್ಲ. ತಾವು ಕೂಡ ಒಪ್ಪಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಕೂಡ, ಈ ವಿಷಯದ ಬಗ್ಗೆ ಎಷ್ಟು ದಿನಗಳ ಕಾಲ ಚರ್ಚೆ ಮಾಡಿದರೂ ಅದಕ್ಕೆ ನಾವು ಸಿದ್ದರಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇಲ್ಲಿ

ಡಾ|| ರಾಜ್‌ರವರು ಬಿಡುಗಡೆ ಆಗುವುದು ಮುಖ್ಯ. ನಿನ್ನೆ ಮಾನ್ಯ ಅಡ್ವಾನಿಯವರ ಹತ್ತಿರ ಮಾತನಾಡುವ ಸಂದರ್ಭದಲ್ಲೂ ಮಾನ್ಯ ಸದಸ್ಯರು ಇದ್ದರು.

ಶ್ರೀ ಡಿ.ವಿ. ಸದಾನಂದಗೌಡ : ತಾವು ಮಾತನಾಡುವಂಥ ಸಂದರ್ಭದಲ್ಲಿ ನಾನು ಒಳಗಡೆ ಬರಲಿಲ್ಲ. ಆ ಸಂದರ್ಭದಲ್ಲಿ ನಾವು ಒಳಗಡೆ ಬರುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಒಳಗಡೆ ಬರಲಿಲ್ಲವೆಂದರೆ, ಸಾಮಾನ್ಯವಾಗಿ ಮನವಿ ಮಾಡಿಕೊಂಡು ನಂತರ ಹೊರಗಡೆ ಬಂದಿರಿ, ಅದು ಬೇರೆ ವಿಚಾರ. ನಮ್ಮ ಕನ್‌ಸರ್ನ್ ಏನು ಇದೆ ಅದನ್ನು ನಾವು ವ್ಯಕ್ತ ಮಾಡುತ್ತಿದ್ದೇವೆ. ತಾವು ಹಾಗೂ ಈ ಸದನದ ಎಲ್ಲಾ ಸದಸ್ಯರೂ ಕೂಡ ಸಹಕಾರ ಕೊಡುತ್ತಿದ್ದೀರಿ. ಈ ಸಂಬಂಧವಾಗಿ ನಾನು ಅನೇಕ ಸಲ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೇನೆ. ಅವರ ಸಹಕಾರ, ಸಹಾಯ, ಎಲ್ಲವೂ ಇದೆ, ಇದೊಂದು ರಿಸಾಲ್ವ್ ಆಗಲಿ, ಬಹಳ ಡೆಲಿಕೇಟ್ ವಿಷಯ ಇರುವುದರಿಂದ ಇದರ ಬಗ್ಗೆ ಪದೇ ಪದೇ ಇಲ್ಲಿ ಈ ಸಂದರ್ಭದಲ್ಲಿ ಪ್ರಸ್ತಾಪಿಸತಕ್ಕಂಥಾದ್ದು ಸಮಂಜಸವಲ್ಲವೆಂದು ನಾವು ಕೇಳಿಕೊಂಡಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತೆಗೆದುಕೊಂಡಿರುವ ಎಲ್ಲಾ ವಿಚಾರಗಳಿಗೂ ನಮ್ಮ ಸಹಮತವಿದೆ. ಡಾ|| ರಾಜ್‌ಕುಮಾರ್‌ರವರ ಸುರಕ್ಷಿತ ಬಿಡುಗಡೆಗೆ ತಾವು ಏನು ಕಾಳಜಿ ಮಾಡುತ್ತಿದ್ದೀರಿ ನಾವು ಕೂಡ ಅಷ್ಟೇ ಕಾಳಜಿ ಇಟ್ಟುಕೊಂಡು ಇಲ್ಲಿ ಮಾತನಾಡುತ್ತಿದ್ದೇವೆ. ಆದರೆ ನಾವು ಏನು ಹೇಳುವುದೆಂದರೆ, ಇದರ ಬಗ್ಗೆ ಸ್ವಲ್ಪ ಸ್ಪೀಡ್‌ಅಪ್ ಆಗಬೇಕು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಿನ್ನೆ ಕೇಂದ್ರದ ಗೃಹ ಸಚಿವರನ್ನು ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿಮಾನ ನಿಲ್ದಾಣದಲ್ಲಿ ಭೇಟಿ ಮಾಡಿದಂಥ ಸಂದರ್ಭದಲ್ಲಿ ನಾನು ಕೂಡ ಅಲ್ಲಿ ಇದ್ದೆ. ಆದರೆ ಸಚಿವರೀರ್ವರು ಈ ಸೂಕ್ಷ್ಮ ವಿಚಾರಗಳನ್ನು ಮಾತನಾಡುವಂಥ ಸಂದರ್ಭದಲ್ಲಿ ನಾನು ಅಲ್ಲಿ ಇರಲಿಕ್ಕೆ ಆಗಲಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಪೂರ್ಣ ವಿವರ ಹೇಳಲಿಕ್ಕೆ ಹೋಗಬೇಡಿ. ಇನ್ನು ಎರಡು ಗಂಟೆಗಳ ಕಾಲ ನೀವು ಕಾಯುವುದಕ್ಕೆ ಸಿದ್ದರಿಲ್ಲವೇ ? ಮಧ್ಯಾಹ್ನ ಮೂರು ಗಂಟೆಗೆ ಬಿ.ಎ.ಸಿ. ಮೀಟಿಂಗ್ ಇಟ್ಟುಕೊಂಡಿದ್ದೇವೆ. ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಿದ ನಂತರ ನಾವು ಏನು ತೀರ್ಮಾನ ತೆಗೆದುಕೊಳ್ಳುತ್ತೇವೆ ಅದನ್ನು ನೋಡಿ ನಂತರ ತಾವು ಮಾತನಾಡಬಹುದು.

(ಗೊಂದಲ)

ಅಷ್ಟರಲ್ಲಿ ತಾವು ಏಕೆ ಆ ರೀತಿ ಮಾಡುತ್ತೀರಿ ? ಅಷ್ಟರಲ್ಲಿ ಇಲ್ಲಿ ಏನೂ ಕೊಳ್ಳೆ ಹೋಗುವುದಿಲ್ಲ ದಯಮಾಡಿ ಮೂರು ಗಂಟೆಯವರೆಗೆ ತೆಗೆದುಕೊಳ್ಳಿ. ಅಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತೇವೆಯೋ ಆ ಪ್ರಕಾರ ಮಾಡೋಣ.

ಶ್ರೀ ಡಿ.ವಿ. ಸದಾನಂದಗೌಡ : ಹಾಗಾದರೆ ಈಗ ಯಾರೂ ಕೂಡ ಮಾತನಾಡಬಾರದೆ?

ಅಧ್ಯಕ್ಷರು : ಮಾತನಾಡುವ ಪ್ರಶ್ನೆಯಲ್ಲ, ಸಧ್ಯಕ್ಕೆ ಬೇಡವೆಂದು ನಾನು ಹೇಳುತ್ತಿರುವುದು, ಮಾತನಾಡಿ, ಆದರೆ ಪೂರ್ಣ ವಿವರಕ್ಕೆ ಹೋಗದೆ ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಸಿ. ಬೈರೇಗೌಡ : ಈಗಿರುವ ಸಮಸ್ಯೆ ಬಹಳ ಸೀಮಿತವಾಗಿರುವ ಸಮಸ್ಯೆ. ನಮ್ಮ ಸರ್ಕಾರ ಇದಕ್ಕೆ ಕಾರಣ ಎಂದು ಆಪಾದನೆ ಮಾಡಿದ್ದಾರೆ, ಹೀಗಾಗಿ ನಾವು ಸರ್ಕಾರ ನಡೆಸಿರುವಂಥವರು ಇದರ ಬಗ್ಗೆ ಉತ್ತರ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಹಿಂದಿನ ಮುಖ್ಯಮಂತ್ರಿಗಳ ಬಗ್ಗೆ ಕೊಟ್ಟಿರುವ ಹೇಳಿಕೆಯ ಬಗ್ಗೆ ನಾನು ಮಾತನಾಡುತ್ತಿಲ್ಲ. ನಾನು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ಭೈರೇಗೌಡರವರು ಏಕೆ ಮಧ್ಯೆ ಮಾತನಾಡುತ್ತೀರಿ?

ಶ್ರೀ ಸಿ. ಬೈರೇಗೌಡ : ನೀವು ಈ ವಿಚಾರವನ್ನು ಎಲ್ಲಿಗೋ ತೆಗೆದುಕೊಂಡು ಹೋಗುತ್ತಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳಬೇಕೆ?

(ಗೊಂದಲ)

ಅಧ್ಯಕ್ಷರು : ಒಬ್ಬರು ಮಾತನಾಡಿದರೆ ಮಾತ್ರ ರೆಕಾರ್ಡ್ ಮಾಡಿಕೊಳ್ಳಿ. ಒಟ್ಟಿಗೆ ಹಲವು ಸದಸ್ಯರು ಮಾತನಾಡಿದರೆ ರೆಕಾರ್ಡ್ ಮಾಡಿಕೊಳ್ಳಬೇಡಿ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ನೀವು ಐದಾರು ಗಂಟೆಗಳ ಕಾಲ ಮಾತನಾಡಿದ ರೀತಿಯಲ್ಲಿ ನಾನು ಮಾತನಾಡುವುದಿಲ್ಲ.

ಶ್ರೀ ಸಿ. ಬೈರೇಗೌಡ : ನಿಮಗೆ ಮಾತನಾಡುವುದಕ್ಕೆ ಬರುವುದಿಲ್ಲವೆಂದರೆ ಅದಕ್ಕೆ ನಾನೇನು ಮಾಡಲಿ?

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈಗಾಗಲೇ ಹೇಳಿದಹಾಗೆ, ಮಧ್ಯಾಹ್ನ ಮೂರು ಗಂಟೆಗೆ ಇದೇ ವಿಷಯವನ್ನು ಬಿ.ಎ.ಸಿ.ಯಲ್ಲಿ ತೆಗೆದುಕೊಳ್ಳುತ್ತೇವೆ, ಯಾವತ್ತು ಚರ್ಚಿಸಬೇಕು, ಯಾವ ಮಾರ್ಗದಲ್ಲಿ ಚರ್ಚಿಸಬೇಕು, ಯಾವ ರೀತಿಯಲ್ಲಿ ಚರ್ಚಿಸಬೇಕು ಎನ್ನುವುದರ ಬಗ್ಗೆ ನಾವು ಈಗಾಗಲೇ ಮಾತನಾಡಿಕೊಂಡಿದ್ದೇವೆ, ನೀವು ಏನು ಹೇಳುತ್ತೀರಿ ಅದಕ್ಕೆ ಸರ್ಕಾರದವರು ಉತ್ತರ ಕೊಡಬೇಕು, ನಂತರ ಅವರು ತಮ್ಮ ಮೇಲೆ ಮಾಡಿರುವ ಆಪಾದನೆಯ ಬಗ್ಗೆ ಉತ್ತರ ಕೊಡುತ್ತಾರೆ. ಹೀಗಾದರೆ ಇದು ಎಲ್ಲಿಗೆ ಮುಗಿಯುತ್ತದೆ? ಆದಷ್ಟು ಬೇಗ ತಾವು

ಕನ್‌ಕ್ಲೂಡ್ ಮಾಡಿ. ದಯಮಾಡಿ ನೀವು ವಿವರವಾಗಿ ಹೇಳಬೇಡಿ, ಈಗಾಗಲೇ ನಿಮ್ಮ ನಾಯಕರು ಮಾತನಾಡಿದ ಮೇಲೆ ಇನ್ನೇನು ಇದೆ?

ಶ್ರೀ ಡಿ.ವಿ. ಸದಾನಂದ ಗೌಡ : ಆಯಿತು ಸಾರ್, ನಾನು ವಿವರವಾಗಿ ಹೇಳದೇ ಸಂಕ್ಷಿಪ್ತವಾಗಿ ಹೇಳಿ ಮುಗಿಸುತ್ತೇನೆ. ತಾವು ತಮ್ಮ ಕೊಠಡಿಯಲ್ಲಿ ನಮಗೆ ಏನು ಆದೇಶ ನೀಡಿದಿರಿ ಎಂದರೆ, ಬೇರೆ ವಿಧಾನಸಭೆಯಲ್ಲಿ ಚರ್ಚೆಯಾಗಿರುವ ವಿಷಯವನ್ನು ಇಲ್ಲಿ ಚರ್ಚಿಸುವುದು ಬೇಡ ಎಂದು ಹೇಳಿದಿರಿ. ಕಾನೂನಿನ ಚೌಕಟ್ಟಿನಲ್ಲೂ ಕೂಡ ಇದು ಸರಿಯಲ್ಲವೆಂದು ನಾನು ಒಪ್ಪುತ್ತೇನೆ. ಈಗ ನನ್ನ ವಿನಂತಿ ಏನೆಂದರೆ, ನಮ್ಮ ಗೃಹ ಸಚಿವರು ನಮ್ಮ ಕೇಂದ್ರ ಗೃಹ ಸಚಿವರ ಜೊತೆಯಲ್ಲಿ ಈಗಾಗಲೇ ಸಮಾಲೋಚಿಸಿದ್ದಾರೆ, ಸೂಕ್ಷ್ಮ ವಿಚಾರಗಳು ಇರಬಹುದು, ಅದನ್ನು ಸದನದಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲದಿರಬಹುದು. ಆದರೂ ಕೂಡ ಈ ಕೆಲಸಗಳು ಇನ್ನಷ್ಟು ಸ್ಪೀಡ್‌ಅಪ್ ಆಗಬೇಕು ಎನ್ನುವುದೇ ನಮ್ಮ ಭಾವನೆ. ಏಕೆಂದರೆ ಕಳೆದ 15 ದಿವಸಗಳಿಂದ ನಿರೀಕ್ಷಿತ ಮಟ್ಟದಲ್ಲಿ ಸ್ಪೀಡ್‌ನಲ್ಲಿ ಹೋಗಲಿಲ್ಲ. ಆದಕಾರಣ, ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ? ಶ್ರೀ ನೆಡುಮಾರನ್ ಬಗ್ಗೆ ಇವರೇನು ಆಲೋಚನೆ ಮಾಡಿದ್ದಾರೆ? ಬಿಕ್ಕಟ್ಟು ಅಂತ್ಯವಾಗಿದೆಯೇ? ಮಾತುಕತೆ ನಡೆದಿದೆಯೇ? ಈ ಎಲ್ಲಾ ವಿಚಾರಗಳು ಸದನಕ್ಕೆ ಹಾಗೂ ಜನತೆಗೆ ತಿಳಿಯಬೇಕು. ಜನ ತಾಳ್ಮೆಗೆಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ಬೇಕಾದರೆ ಜನಗಳಿಗೆ ಸೂಚನೆಗಳು ಹೋಗಲಿ, ಬಿಡಿಸುವಂಥ ಒಳ ಸೂಕ್ಷ್ಮಗಳ ಬಗ್ಗೆಯಾಗಲಿ, ಅದರ ಒಳಗಿನ ವಿಚಾರಗಳ ಬಗ್ಗೆ ನಾನು ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ಇದರ ಪ್ರಸ್ತಾಪದ ಅವಶ್ಯಕತೆಯೂ ಇಲ್ಲ. ಇವತ್ತು ಸದನದಲ್ಲಿ ಚರ್ಚೆಯಾಗಿ ಯಾವುದೇ ರೀತಿಯ ಕ್ಲಿಷ್ಟ ಪರಿಸ್ಥಿತಿ ಬರುವಂತೆ ನಾವು ಮಾಡುವುದಿಲ್ಲ. ಆದಕಾರಣ ಸರ್ಕಾರ ಸ್ಪಷ್ಟನೆ ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ತಾವು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಚರ್ಚೆಗೆ ಅವಕಾಶ ನೀಡಿದ್ದಕ್ಕೆ ನನಗೆ ಸಂತೋಷವಾಗಿದೆ. ಇವತ್ತು ಯಾವರೀತಿ ಚರ್ಚೆ ಮಾಡಬೇಕೆಂದು ನಾನೂ ಕೂಡ ಬಹಳ ಆಶಾವಾದಿಯಾಗಿದ್ದೇನೆ. ಸರ್ಕಾರದ ವಕ್ತಾರರು ಮತ್ತು ಮುಖಂಡರುಗಳು ಏನಾದರೂ ಒಳ್ಳೆಯ ಫಲಿತಾಂಶ ಸಿಗಬಹುದು ಎನ್ನುವ ಒಂದು ಆಶೆಯನ್ನು ಇಟ್ಟುಕೊಂಡಿದ್ದಾರೆ. ಇದರ ಬಗ್ಗೆ ಕರ್ನಾಟಕದ ಜನತೆ ಕೂಡ ಒಂದು ಆಶೆಯನ್ನು ಇಟ್ಟುಕೊಂಡಿದ್ದಾರೆ. ಇದು ಒಂದು ತಮಿಳುನಾಡು ಮತ್ತು ಕರ್ನಾಟಕದ ಜನಗಳ ಮಧ್ಯೆಯಿರುವ ಸಂಘರ್ಷವಲ್ಲ. ತಮಿಳುನಾಡಿನ ಅನೇಕ ಮುಖಂಡರನ್ನು ನಾವು ರಾಷ್ಟ್ರ ನಾಯಕರೆಂದು ಪರಿಗಣಿಸುತ್ತೇವೆ. ಉದಾಹರಣೆಗೆ ಹೇಳುವುದಾದರೆ ಮಾನ್ಯ ಕಾಮರಾಜ್‌ರವರು, ಮಾನ್ಯ ರಾಜಾಜಿಯವರು, ಇಂಥ ಅನೇಕ ಮುಖಂಡರುಗಳನ್ನು ನಾವು ರಾಷ್ಟ್ರ ನಾಯಕರೆಂದು ಒಪ್ಪುತ್ತೇವೆ. ಅವರು ಸಹಿತ ನಮ್ಮನ್ನು ಅದೇ ದೃಷ್ಟಿಯಲ್ಲಿ ನೋಡುತ್ತಾರೆ. ಆದರೆ, ವಿಷದ ಹಾವು ತಮಿಳುನಾಡಿನ ಅಥವಾ ಕರ್ನಾಟಕದ ಕಾಡಿನಲ್ಲಿ ಇದ್ದರೆ ಅದಕ್ಕೆ ಯಾರೂ ಕೂಡ ಹಾಲನ್ನು ಹಾಕಬಾರದು. ಆ ವಿಷದ ಹಾವಿಗೆ ಹಾಲು ಹಾಕುವ ಕೆಲಸವನ್ನು ಅವರು ಯಾರಾದರೂ ಸರಿಯೇ, ಯಾವುದೇ ಸ್ಥಾನದಲ್ಲಿದ್ದರೂ ಸರಿಯೇ ಅದನ್ನು ಮಾಡಬಾರದು. ಇದು ಬಹಳ ಮುಖ್ಯವಾಗಿರತಕ್ಕಂಥ ವಿಚಾರ. ಮಾನ್ಯ ಮುಖ್ಯಮಂತ್ರಿಗಳ ಸ್ಥಿತಿ ಹಾಗೂ ಸರ್ಕಾರದ ಚಿಂತನೆಯನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಕರ್ನಾಟಕ ಹಾಗೂ ತಮಿಳುನಾಡಿನ ಮುಖ್ಯಮಂತ್ರಿಗಳು ದಿನಾಂಕ

19.8.1997ರಂದು ಏನು ಎಂಟು ವಿಚಾರಗಳಲ್ಲಿ ಒಪ್ಪಂದ ಮಾಡಿಕೊಂಡಿದ್ದಾರೆ, ಆ ಒಪ್ಪಂದದ ಪ್ರಕಾರ ಶ್ರೀಮಾನ್ ಜೆ.ಹೆಚ್. ಪಟೇಲ್‌ರವರು ನಡೆದುಕೊಂಡಿದ್ದಾರೆ. ಟಾಡಾ ಬಂಧಿಗಳನ್ನು ರಿಲೀಸ್ ಮಾಡುವುದರ ಬಗ್ಗೆ, 125 ಜನ ಇದ್ದಂಥ ವಿಚಾರಣೆಯಲ್ಲಿ ನಾವು ರಿವ್ಯೂ ಮಾಡುತ್ತೇವೆಂದು ಹೇಳಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಡಿ.ಜಿ.ಪಿ.ಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ, 75 ಜನ ಟಾಡಾ ಬಂಧಿಗಳ ಬಿಡುಗಡೆ ಮಾಡಿದ್ದಾರೆ. 51 ಜನ ಟಾಡಾ ಬಂಧಿಗಳನ್ನು ಏಕೆ ಬಿಡುಗಡೆಗೊಳಿಸಲಿಲ್ಲವೆಂದರೆ ಅವರ ಮೇಲೆ ಇರತಕ್ಕಂಥ ಪ್ರಕರಣಗಳ ತೀವ್ರತೆ ಮೇಲೆ ಅವರನ್ನು ಬಿಡುಗಡೆ ಮಾಡಲಿಕ್ಕೆ ಆಗಲಿಲ್ಲ. ಶ್ರೀಮಾನ್ ಜೆ.ಹೆಚ್. ಪಟೇಲ್‌ರವರ ಸರ್ಕಾರ ಏನು ಈ 51 ಜನ ಟಾಡಾ ಬಂಧಿಗಳನ್ನು ಬಿಡುಗಡೆ ಮಾಡಲಿಲ್ಲವೋ ಆ ತೀರ್ಮಾನವನ್ನು ಇವತ್ತು ಸರ್ವೋಚ್ಚ ನ್ಯಾಯಾಲಯದವರು ಎತ್ತಿ ಹಿಡಿದಿದ್ದಾರೆ. ಈ ಟಾಡಾ ಬಂಧಿಗಳ ಬಿಡುಗಡೆಗೆ ಸಂಬಂಧದಲ್ಲಿ ಶ್ರೀಮಾನ್ ಜೆ.ಹೆಚ್. ಪಟೇಲ್‌ರವರ ಸರ್ಕಾರ ಕಾನೂನು ಪ್ರಕಾರ ನಡೆದುಕೊಂಡಿದೆಯೇ ವಿನಹ ಕಾನೂನು ಬಾಹಿರವಾಗಿ ಏನೂ ನಡೆದುಕೊಂಡಿಲ್ಲ. ಇದರ ಜೊತೆಗೆ ಆ ದಿನ ಆಗಿದ್ದಂಥ ಒಪ್ಪಂದ ಒಂದರಲ್ಲಿ ಈ ಪ್ರಕರಣವನ್ನು ತಮಿಳುನಾಡಿಗೆ ವರ್ಗಾಯಿಸಬೇಕು ಎನ್ನುವ ಪ್ರಶ್ನೆ ಕೂಡ ಬಂದಿತ್ತು. ಇದಕ್ಕೂ ಕೂಡ ಶ್ರೀಮಾನ್ ಪಟೇಲ್‌ರವರ ಸರ್ಕಾರ ಒಪ್ಪಿಗೆ ಕೊಟ್ಟಿತು. ಆದರೆ ಸರ್ವೋಚ್ಚ ನ್ಯಾಯಾಲಯ ಅದಕ್ಕೆ ಅಡ್ಡಿಪಡಿಸಿತು. ಇದು ಕಾನೂನುಬಾಹಿರವಾಗಿ ಆಗುತ್ತದೆ, ಅದಕ್ಕಾಗಿ ಈ ಪ್ರಕರಣವನ್ನು ವರ್ಗಾಯಿಸಲಿಕ್ಕೆ ಬರುವುದಿಲ್ಲವೆಂದು ಹೇಳಿತು. ಹಿಂದಿನ ಸರ್ಕಾರದಲ್ಲಿ ಟಾಡಾ ಬಂಧಿಗಳ ಬಿಡುಗಡೆ ಕಾನೂನು ಪ್ರಕಾರ ನಡೆದಿದೆ. ಈ ವಿಚಾರವಾಗಿ ಕರ್ನಾಟಕದ ಮುಖ್ಯಮಂತ್ರಿಗಳು ಹಾಗೂ ತಮಿಳುನಾಡಿನ ಮುಖ್ಯಮಂತ್ರಿಗಳು ನೇರವಾಗಿ ಪ್ರಸ್ತಾಪಿಸಲಿಲ್ಲ. ಆ ದಿನ ಏನೇ ಮಾತುಕತೆ ಆಗಿದ್ದರೂ ಪತ್ರಿಕಾ ಹೇಳಿಕೆ ತಮಿಳುನಾಡಿನಲ್ಲಿ (ಚೆನ್ನೈ) ಬಿಡುಗಡೆಯಾಗಿದೆ. ಅದರ ಪ್ರಕಾರ ನಾನು ಆ ವಿಚಾರಗಳ ಬಗ್ಗೆ ಪ್ರಸ್ತಾಪಿಸಿದ್ದೇನೆಯೇ ಹೊರತು, that is a public document. ತಮಿಳುನಾಡಿನ ಮುಖ್ಯಮಂತ್ರಿಯ ಪರಿಸ್ಥಿತಿಯನ್ನು, ಅವರ ಕುಟುಂಬದಲ್ಲಿರುವ ಪರಿಸ್ಥಿತಿಯನ್ನು, ನಾನು ಅರ್ಥ ಮಾಡಿಕೊಂಡಿದ್ದೇನೆ. ಡಾ|| ರಾಜ್ ಕುಮಾರ್‌ರವರು ಕಾಡಿನಲ್ಲಿ ಇದ್ದಾರೆ, ಅವರು ಸುರಕ್ಷಿತವಾಗಿ ಮರಳಿ ನಾಡಿಗೆ ಬರಬೇಕು ಎನ್ನುವುದನ್ನೂ ಕೂಡ ನಾನು ಅರ್ಥ ಮಾಡಿಕೊಂಡಿದ್ದೇನೆ.

1.00 ಪಿ.ಎಂ.

ಆದರೆ ತಮಿಳುನಾಡು ಮುಖ್ಯಮಂತ್ರಿಗಳು ನೀಡಿರತಕ್ಕಂಥ ಹೇಳಿಕೆ ಸತ್ಯಕ್ಕೆ ದೂರವಾದದ್ದೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಪರಿಶಿಷ್ಟ ಜಾತಿ/ವರ್ಗಗಳ ಕಾಲೇಜು ವಿದ್ಯಾರ್ಥಿಗಳಿಗೆ ಇನ್‌ಕಂ ಲಿಮಿಟ್‌ನಿಂದ ಸ್ಕಾಲರ್‌ಶಿಪ್ ಮತ್ತು ಕಾಲೇಜು ಶುಲ್ಕದಿಂದ ವಂಚಿತರಾಗಿರುವ ಬಗ್ಗೆ

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಸಚಿವರಲ್ಲಿ ಒಂದು ವಿಚಾರವನ್ನು ನಾನು ಮನವರಿಕೆ ಮಾಡಿಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ. ಕಾಲೇಜಿನಲ್ಲಿ ಓದತಕ್ಕಂಥ